ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 12 ]
Total No. of Printed Pages : 12 ]

ಒಟ್ಟು ಪ್ರಶ್ನೆಗಳ ಸಂಖ್ಯೆ : 48 ]
Total No. of Questions : 48 ]

**ಸಂಕೇತ ಸಂಖ್ಯೆ : 33-K**
**Code No. : 33-K**

# C

**CCE PF**
**CCE PR**
**NSR & NSPR**

Question Paper Serial No. **302**

ಇಲ್ಲಿಂದ ಕತ್ತರಿಸಿ

# ವಿಷಯ : ದ್ವಿತೀಯ ಭಾಷೆ — ಕನ್ನಡ
# Subject : Second Language — KANNADA

**(ಖಾಸಗಿ ಅಭ್ಯರ್ಥಿ & ಪುನರಾವರ್ತಿತ ಖಾಸಗಿ ಅಭ್ಯರ್ಥಿ / ಎನ್.ಎಸ್.ಆರ್. & ಎನ್.ಎಸ್.ಪಿ.ಆರ್.)**

**(Private Fresh & Private Repeater / NSR & NSPR)**

ದಿನಾಂಕ : 30. 03. 2022 ] [ Date : 30. 03. 2022

ಸಮಯ : ಬೆಳಗ್ಗೆ 10-30 ರಿಂದ ಮಧ್ಯಾಹ್ನ 1-30 ರವರೆಗೆ ] [ Time : 10-30 A.M. to 1-30 P.M.

ಗರಿಷ ಅಂಕಗಳು : 100 ] [ Max. Marks : 100

**TEAR HERE TO OPEN THE QUESTION PAPER**
ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

## *ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :*

1. ಈ ಪ್ರಶ್ನೆಪತ್ರಿಕೆಯು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಒಟ್ಟು 48 ಪ್ರಶ್ನೆಗಳನ್ನು ಹೊಂದಿದೆ.

2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.

3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.

4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.

5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

Tear here

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ : 5 × 1 = 5**

1. ಅನುಸ್ವಾರ, ವಿಸರ್ಗಗಳನ್ನು ಹೀಗೆ ಕರೆಯುತ್ತಾರೆ

   (ಎ) ಯೋಗವಾಹಗಳು

   (ಬಿ) ಸ್ವರಗಳು

   (ಸಿ) ವ್ಯಂಜನಗಳು

   (ಡಿ) ಅನುನಾಸಿಕಗಳು

2. ದ್ವಿರುಕ್ತಿ ಪದವಿದು

   (ಎ) ಕ್ರಿಮಿಕೀಟ

   (ಬಿ) ದೊಡ್ಡದೊಡ್ಡ

   (ಸಿ) ಹಗಲಿರುಳು

   (ಡಿ) ಸುಖದುಃಖ

3. ಆಗಮ ಸಂಧಿಗೆ ಉದಾಹರಣೆಯಾಗಿರುವ ಪದ

(ಎ) ಮತ್ತೊಬ್ಬ

(ಬಿ) ವೀರೇಶ

(ಸಿ) ದೇವಾಲಯ

(ಡಿ) ಕಾಶಿಯಲ್ಲಿ

4. ಬಾಂದಳದಲ್ಲಿ – ಪದದಲ್ಲಿರುವ ವಿಭಕ್ತಿಯ ಹೆಸರು

(ಎ) ಪ್ರಥಮಾ ವಿಭಕ್ತಿ

(ಬಿ) ತೃತೀಯಾ ವಿಭಕ್ತಿ

(ಸಿ) ಸಪ್ತಮಿ ವಿಭಕ್ತಿ

(ಡಿ) ಪಂಚಮಿ ವಿಭಕ್ತಿ

5. ರೂಢನಾಮಕ್ಕೆ ಉದಾಹರಣೆಯಾದ ಪದ

(ಎ) ಜಿಂಕೆ

(ಬಿ) ಇಂದ್ರ

(ಸಿ) ಕಾಶಿ

(ಡಿ) ಚಂದ್ರ

**II. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ : 14 × 1 = 14**

6. ಇಂದ್ರನಿಗೆ ಗಿಳಿಯನ್ನು ಕಂಡು ಆಶ್ಚರ್ಯವಾದದ್ದು ಏಕೆ ?

7. ಶ್ರೀ ಪಂಡಿತಾರಾಧ್ಯ ಶಿವಾಚಾರ್ಯರ ಪ್ರಕಾರ ದೇಶದ ಉದ್ಧಾರ ಯಾರು ಯಾರನ್ನು ಅವಲಂಬಿಸಿದೆ ?

8. ಸಸ್ತನಿಗಳ ಆಶ್ರಯದಾಣಗಳು ಯಾವುವು ?

9. ಹಕ್ಕಿಗೂಡಿನಲ್ಲಿ ಯಾವುದರ ಸಮನ್ವಯತೆ ಇದೆ ?

10. ವಿದ್ಯಾರ್ಥಿಗಳು ಕಾಫೀ ಕುಡಿಯಲು ಎಂತಹ ಕಪ್ಪುಗಳನ್ನು ಆರಿಸಿಕೊಂಡರು ?

11. ಗುರುಗಳು ಯಾವುದನ್ನು ದುರ್ದೈವದ ಸಂಗತಿ ಎಂದು ಬಣ್ಣಿಸಿದರು ?

12. ಗೋಪಾಲನ ಬೆಳಗಿನ ಮುಖ್ಯ ಕೆಲಸ ಯಾವುದಾಗಿತ್ತು ?

13. ಏಣಿಗೆ ಬೀಳುವ ಭಯವಿಲ್ಲ ಏಕೆ ?

14. ಬುದ್ಧನು ಅರಿತುಕೊಂಡ ಬದುಕಿನ ಸತ್ಯವೇನು ?

15. ಕವಿ ಸಿ.ಪಿ.ಕೆ.ಯವರು ನಮ್ಮ ಕರ್ತವ್ಯಗಳನ್ನು ಹೇಗೆ ಮುಗಿಸಬೇಕೆಂದು ಹೇಳಿದ್ದಾರೆ ?

16. ಅಡಿಗರು ಯಾವುದಕ್ಕೆ ಹಗಲಿರುಳು ಹೋರಾಡಬೇಕೆಂದಿದ್ದಾರೆ ?

17. ತುಂಬಿದ ಕುಣಿಗಲ್ ಕೆರೆಯನ್ನು ಯಾವುದಕ್ಕೆ ಹೋಲಿಸಿದ್ದಾರೆ ?

18. ಸಿದ್ಧರಾಮೇಶ್ವರರು ಹೇಳುವಂತೆ ಕೆರೆಗಳು ನಿಷ್ಪ್ರಯೋಜಕವಾಗುವುದು ಯಾವಾಗ ?

19. ಕೌರವನ ಸೇನೆ ಉತ್ತರನಿಗೆ ಹೇಗೆ ಕಾಣಿಸಿತು ?

**III. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 12 × 2 = 24**

20. ರೈತರು ಎದುರಿಸುತ್ತಿರುವ ಸಮಸ್ಯೆಗಳು ಯಾವುವು ?

21. ನಮ್ಮ ದೇಶದ ರಕ್ಷಣಾ ಪಡೆ ಏಕೆ ಪ್ರಬಲವಾಗಿರಬೇಕು ? ವಿವರಿಸಿ.

22. ಬಾಲಕ ಪುಟ್ಟಯ್ಯ ಕಣ್ಣುಗಳನ್ನು ಕಳೆದುಕೊಂಡದ್ದು ಹೇಗೆ ?

23. ಹಕ್ಕಿಗೂಡಿನಲ್ಲಿ ಬದುಕಿನ ಯಾವ ಯಾವ ಅನುಭವಗಳಿವೆ ?

24. ಹಿರಿಯ ವಿದ್ಯಾರ್ಥಿಗಳು ಹೆಡ್ ಮಾಸ್ತರರ ಬಳಿ ಯಾವ ವಿಚಾರಗಳನ್ನು ಹೇಳಿಕೊಳ್ಳುತ್ತಿದ್ದರು ?

25. ಭಗವಂತ ಕೊಟ್ಟ ಈ ಬದುಕನ್ನು ಯಾವ ರೀತಿ ನಡೆಸಬೇಕೆಂದು ಗುರುಗಳು ಹೇಳಿದರು ?

26. ಮಲಗಿದ್ದ ಗೋಪಾಲನನ್ನು ತಾಯಿಯು ಯಾವ ಮಾತುಗಳಿಂದ ಏಳಿಸಿದಳು ?

27. ಏಣಿಯ ಸಹಾಯದಿಂದ ಮೇಲೇರಿದವರಿಗೆ ಏಣಿಯ ಉಪದೇಶವೇನು ?

28. ಸಿದ್ಧಾರ್ಥ ಬುದ್ಧನಾದ ಸಂದರ್ಭದಲ್ಲಿ ಕಾಡಿನ ತುಂಬ ಪ್ರೀತಿ ಹೇಗೆ ತುಂಬಿಕೊಂಡಿತು ?

29. ಸದ್ದು ಮಾಡದೆ ಬಾಳಬೇಕು ಎಂಬುದಕ್ಕೆ ಕವಿ ಸಿ.ಪಿ.ಕೆ. ಅವರು ನೀಡುವ ಹೋಲಿಕೆಗಳು ಯಾವುವು ?

30. ವೈದ್ಯರು ಭೀಮನಾಯಕನ ಮಗನ ಪ್ರಾಣವನ್ನು ಹೇಗೆ ಉಳಿಸಿದರು ? ವಿವರಿಸಿ.

31. ಭೀಮನಾಯಕನ ಮನಸ್ಸನ್ನು ಪರಿವರ್ತಿಸಿದ ವೈದ್ಯರ ಮಾತುಗಳನ್ನು ಕುರಿತು ಬರೆಯಿರಿ.

**IV. ಕೆಳಗಿನ ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ : $2 \times 3 = 6$**

32. ಬಸವರಾಜ ಸಬರದ

33. ರಮೇಶಗೌಡ ಎಂ.ಕೆ.

**V. ಕೆಳಗಿನ ಪದ್ಯದ ಸಾರಾಂಶವನ್ನು ವಾಕ್ಯರೂಪದಲ್ಲಿ ಬರೆಯಿರಿ : 1 × 3 = 3**

34. ವೇಷಧರಿಸಿ ಫಲವೇನಯ್ಯ
ವೇಷದಂತಾಚರಣೆ ಇಲ್ಲದನ್ನಕ್ಕ
ವೇದಾಂತವನೋದಿ ಫಲವೇನಯ್ಯ
ಬ್ರಹ್ಮ ತಾನಾಗದನ್ನಕ್ಕ
ನಾನಾ ಕೆರೆಯ ತೋಡಿ ಫಲವೇನಯ್ಯ
ಪುಣ್ಯ ತೀರ್ಥಗಳು ಬರದನ್ನಕ್ಕ ಕಪಿಲಸಿದ್ಧ ಮಲ್ಲಿಕಾರ್ಜುನ

**VI. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿ : 1 × 3 = 3**

35. "ಮಗುವಿನ ಮುಖ ಚಂದ್ರನಂತೆ ಮನೋಹರವಾಗಿದೆ."

**VII. ಕೆಳಗೆ ಕೊಟ್ಟಿರುವ ಗಾದೆಮಾತುಗಳಲ್ಲಿ ಯಾವುದಾದರೂ ಎರಡನ್ನು ಆರಿಸಿಕೊಂಡು, ವಿಸ್ತರಿಸಿ ಬರೆಯಿರಿ : 2 × 3 = 6**

36. ಪೆನ್ನು ಖಡ್ಗಕ್ಕಿಂತ ಹರಿತ.

***ಅಥವಾ***

ಕಟ್ಟುವುದು ಕಠಿಣ ಕೆಡಹುವುದು ಸುಲಭ.

37. ಅತಿಯಾಸೆ ಗತಿಗೇಡು.

***ಅಥವಾ***

ಮನಸ್ಸಿದ್ದರೆ ಮಾರ್ಗ.

**VIII. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ : 6 × 3 = 18**

38. "ಅದರ ಈಗಿನ ಅವಸ್ಥೆಯನ್ನು ನಾನು ನೋಡಲಾರೆ."

39. "ಅವನು ಬಂದರೆ ಕರೆದುಕೊಂಡು ಹೋಗು ತಾಯಿ."

40. "ಇವರಿಗೆ ಭಾರ ಹೊತ್ತವರ ಕಾಳಜಿಯೇ ಇಲ್ಲ."

41. "ಸಿಡುಕು ಮಿಡುಕನು ತೊರೆದು ಮೌನಿಯಾಗು."

42. "ಬೊಬ್ಬೆ ಹೊಡೆದಾವೆ ಬಾಳೆಮೀನು."

43. "ಎಮ್ಮರಮನೆಯ ನಾರಿಯರೆ ಸಾಕು."

**IX. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ : 1 × 4 = 4**

44. ಕೆಸರೊಳಿದ್ದರು ..................................................

..................................................................

..................................................................

.................................................. ಸಾರ್ಥಕತೆಗೆ.

**ಅಥವಾ**

ಒಂದು ಬಾಣಕೆ ..................................................

..................................................................

..................................................................

.................................... ಹೋರಾಡು ಹಗಲಿರುಳು.

**X. ಕೆಳಗಿನ ಪ್ರಶ್ನೆಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 1 × 4 = 4**

45. ಗೋಪಾಲನು ತನ್ನ ತಾಯಿಯೊಂದಿಗೆ ನಡೆಸಿದ ಸಂಭಾಷಣೆಯ ಸಾರವನ್ನು ಸ್ವಾರಸ್ಯಕರವಾಗಿ ಬರೆಯಿರಿ.

*ಅಥವಾ*

ನನ್ನ ಗೋಪಾಲ ಪಾಠದಲ್ಲಿ ವರ್ಣಿಸಿದ ಪ್ರಕೃತಿಯ ವರ್ಣನೆಯನ್ನು ನೀವು ಮೆಚ್ಚುವ ಅಂಶಗಳೊಂದಿಗೆ ವಿವರಿಸಿ.

**XI. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ : 1 × 4 = 4 ( 2 + 2 )**

ಕೇದಾರ ದೇವಾಲಯ ಬಹು ಸುಂದರವಾಗಿದೆ. ಗರ್ಭಗುಡಿಯ ಒಳಗೆ ಇರುವ ಕೇದಾರೇಶ್ವರ ಅದು ಲಿಂಗವೂ ಅಲ್ಲ, ಮೂರ್ತಿಯೂ ಅಲ್ಲ, ಬರೇ ಒಂದು ಒರಟು ಕಲ್ಲಿನ ಬಂಡೆ. ಪರ್ವತದ ಶಿಖರಾಕೃತಿಯ ಮೇಲೆ ದೇವಾಲಯ ನಿರ್ಮಿಸಿದಂತೆ ಭಾಸವಾಗುತ್ತದೆ. ಪ್ರಾಯಶಃ ಹೊರಗಿನ ಪರ್ವತದ ಸಾಂಕೇತಿಕ ಪ್ರಕೃತಿಯ ಪೂಜೆ ಒಳಗೆ ನಡೆಯುತ್ತದೆ. ಜಾತಿ, ಮತ, ಲಿಂಗ ಯಾವ ಭೇದವೂ ಇಲ್ಲದೆ ಪ್ರತಿಯೊಬ್ಬರೂ ತಾವೆ ಮುಟ್ಟಿ ಪೂಜಿಸುವ ಅಪೂರ್ವ ಅವಕಾಶ ಇಲ್ಲಿದೆ. ಆ ಎತ್ತರದಲ್ಲಾದರೂ ಮನುಷ್ಯ ಮೇಲು–ಕೀಳು ಮರೆತಿದ್ದಾನೆ ಎಂಬುದು ಸಂತೋಷದ ಸಂಗತಿ. ಕೇದಾರನಾಥನ ಬಗೆಗೆ ಪುರಾಣದಲ್ಲಿ ವಿಚಿತ್ರವಾದ ಕಥೆಯೊಂದಿದೆ. ಒಮ್ಮೆ ಶಿವನು ಗೂಳಿಯ ರೂಪವನ್ನು ಧರಿಸಿ ಪರ್ವತ ಪ್ರದೇಶದಲ್ಲಿ ಅಲೆಯುತ್ತಿದ್ದನು. ಅಲ್ಲಿದ್ದ ಪಾಂಡವರು ಇದನ್ನು ತಿಳಿದು ಆ ಗೂಳಿಯನ್ನು ಹಿಡಿಯಲು ಪ್ರಯತ್ನಿಸಿದರು.

ತಪ್ಪಿಸಿಕೊಂಡು ಓಡುತ್ತಿದ್ದ ಗೂಳಿ ಭೂಮಿಯೊಳಗೆ ನುಗ್ಗಲು ಪ್ರಯತ್ನಿಸಿತು. ಆಗ ಭೀಮನು ಅದರ ಹಿಂಭಾಗವನ್ನು ತಬ್ಬಿಕೊಂಡನು. ಅದೆ ಶಿಲಾರೂಪದಲ್ಲಿ ಉಳಿದುಕೊಂಡು ಕೇದಾರೇಶ್ವರ ಆಗಿದೆ. ಗೂಳಿಯ ಇನ್ನುಳಿದ ಭಾಗಗಳಾದ ಕಾಲುಗಳು – ತುಂಗಾನಾಥ, ಮುಖ – ರುದ್ರನಾಥ, ಹೊಟ್ಟೆ – ಮಹೇಶ್ವರ, ಶಿರ – ಕಪಾಲೇಶ್ವರ ಹೀಗೆ ಐದು ಕಡೆಗಳಲ್ಲಿ ಶಿವ ಗೋಚರನಾದ. ಇವುಗಳೆ ಪಂಚಕೇದಾರಗಳೆಂದು ಪ್ರಸಿದ್ಧವಾಗಿವೆ. ಮುಂದಿರದ ಹೊರಗೆ ಈಶಾನ್ಯಕುಂಡ, ಅಮೃತಕುಂಡ, ಹಂಸಕುಂಡ, ರೇತಸಕುಂಡ ಎಂಬ ತೀರ್ಥಗಳಿವೆ. ದೇವಸ್ಥಾನದ ಸ್ವಲ್ಪದೂರದಲ್ಲಿ ಶಂಕರಾಚಾರ್ಯರ ಸಮಾಧಿ ಇದೆ.

46. ಪ್ರಶ್ನೆಗಳು *:*

ಅ) ಪುರಾಣದಲ್ಲಿ ಕೇದಾರನಾಥನ ಬಗೆಗೆ ಇರುವ ವಿಚಿತ್ರ ಕಥೆ ಯಾವುದು ?

ಆ) ಕೇದಾರವನ್ನು ದರ್ಶಿಸಿದವರಿಗೆ ಉಂಟಾಗುವ ಸಂತೋಷದ ಸಂಗತಿ ಯಾವುದು ?

**XII. ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ : 1 × 4 = 4**

47. ಪರಿಸರ ಸಂರಕ್ಷಣೆ ಇಂದಿನ ಅಗತ್ಯತೆ.

***ಅಥವಾ***

ರಾಷ್ಟ್ರೀಯ ಹಬ್ಬಗಳ ಮಹತ್ವ.

**XIII. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ : 1 × 5 = 5**

48. ನಿಮ್ಮನ್ನು ಬೀದರಿನ ಸರ್ಕಾರಿ ಪ್ರೌಢಶಾಲೆಯ 'ಶ್ರಾವಣಿ' ಎಂದು ಭಾವಿಸಿಕೊಂಡು, ಶಾಲೆಯಲ್ಲಿ ವನಮಹೋತ್ಸವ ಆಚರಿಸಲು ಸಸಿಗಳನ್ನು ನೀಡುವಂತೆ ಕೋರಿ ಅರಣ್ಯ ಇಲಾಖೆಯ ಅರಣ್ಯ ಅಧಿಕಾರಿಗಳಿಗೆ ಮನವಿ ಪತ್ರವನ್ನು ಬರೆಯಿರಿ.

***ಅಥವಾ***

ನಿಮ್ಮನ್ನು ಕಲಬುರ್ಗಿಯ ಸರ್ಕಾರಿ ಪ್ರೌಢಶಾಲೆಯ 'ವೈಭವ್' ಎಂದು ಭಾವಿಸಿಕೊಂಡು, ಶಾಲೆಯಲ್ಲಿ ಆಚರಿಸಿದ 'ಮಕ್ಕಳ ದಿನಾಚರಣೆ' ಕಾರ್ಯಕ್ರಮದ ವಿವರವನ್ನು ತಿಳಿಸಿ, ಧಾರವಾಡದ ಸಾಧನಕೇರಿ ನಿವಾಸಿಯಾದ 'ಮಹೇಶ' ಎಂಬ ಹೆಸರಿನ ಗೆಳೆಯನಿಗೆ ಪತ್ರವನ್ನು ಬರೆಯಿರಿ.